ಶ್ರೀ ಕೆ. ಎಂ. ನಾಗಣ್ಣ.—ಬೆಂಗಳೂರಿನಲ್ಲಿ ಫೇರ್‌ಪ್ರೈಸ್ ಡಿಪೋದಲ್ಲಿ ಇತ್ತೀಚೆಗೆ 10 ಜನಗಳು ಇರತಕ್ಕಂಥಾ ಒಂದು ಸಂಸಾರಕ್ಕೆ 40 ಕೆಜಿ ಅಕ್ಕಿಯನ್ನು ಕೊಡುತ್ತಿದ್ದುದನ್ನು 12 ಕೆಜಿ ಗೆ ಇಳಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಆ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ?

ಶ್ರಿಮತಿ ಇ. ಇ. ವಾಜ್.—6½ ವರ್ಷದ ಕೆಳಗಡೆ ಇರತಕ್ಕ ಮಕ್ಕಳಿಗೆ ಒಂದು ಯೂನಿಟ್‌ಗೆ 1 ಕೆ ಜಿ ಯಂತೆಯೂ 6½ ವರ್ಷಕ್ಕಿಂತ ಮೇಲ್ಪಟ್ಟು ಇರತಕ್ಕವರಿಗೆ 2 ಯೂನಿಟ್ ಎಂದರೆ 2 ಕೆ ಜಿ ಅಕ್ಕಿಯನ್ನೂ ಕೊಡರಾಗುತ್ತಿದೆ.

ಶ್ರೀ ಕೆ. ಎಂ. ನಾಗಣ್ಣ.—ನಾನು ಹೇಳುವುದು ಏನೆಂದರೆ ಹಿಂದೆ ಬೆಂಗಳೂರು ಸಿಟಿಯಲ್ಲಿ 10 ಜನ ಇರುವ ಸಂಸಾರಕ್ಕೆ 40 ಕೆ ಜಿ ಅಕ್ಕಿಯನ್ನು ಕೊಡುತ್ತಿದ್ದರು. ಈಗ ಅದನ್ನು 12 ಕೆ ಜಿಗೆ ಇಳಿಸಿದ್ದಾರೆ. ಇದಕ್ಕೆ ತಮ್ಮ ಅನುಮತಿ ಕೊಟ್ಟಿದ್ದೀರಾ?

ಶ್ರಿಮತಿ ಇ. ಇ. ವಾಜ್.—ಕಾರ್ಪೋರೇಷನ್‌ನಲ್ಲಿ ಒಂದು ಪಾಲಸಿ ಮಾಡಿಕೊಂಡಿದ್ದೇವೆ. ಈಗ ಅಕ್ಕಿಯ ದಾಸ್ತಾನು ಕಡಿಮೆ ಇರುವುದರಿಂದ ಈಗಾಗಲೇ ನಾನು ಹೇಳಿದ ನಿಯಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಕೆ. ಎಂ. ನಾಗಣ್ಣ.—ಬೆಂಗಳೂರಿನಲ್ಲಿ ಎಷ್ಟು ನ್ಯಾಯಬೆಲೆಯ ಅಂಗಡಿಗಳು ಇವೆ. ಮತ್ತು ಬೆಂಗಳೂರು ನಗರಕ್ಕೆ ಎಷ್ಟು ಸಕ್ಕರೆ ಕೋಟಾವನ್ನು ಕೊಟ್ಟಿದ್ದೀರಿ. ಯಾವ ಯಾವ ಫೇರ್‌ಪ್ರೈಜ್ ಡಿಪೋಕ್ಕೆ ಎಷ್ಟೆಷ್ಟು ಸಕ್ಕರೆಯನ್ನು ಕೊಡಬೇಕೆಂದು ನಿಗದಿ ಮಾಡಿದ್ದೀರಿ?

ಶ್ರೀಮತಿ ಇ. ಇ. ವಾಜ್.—ಬೆಂಗಳೂರು ನಗರದಲ್ಲಿ ಇಂಡಿವಿಜುಯಲ್ ಫೇರ್‌ಪ್ರೈಸ್ ಡಿಪೋಗಳು ಮತ್ತು ಕೋ-ಆಪರೇಟಿವ್ ಸೊಸೈಟಿಗಳು ಎರ್ಲ್ಲಾ ಸೇರಿ 498 ಇವೆ. ಇವುಗಳಲ್ಲಿ 150 ಕೋ-ಆಪರೇಟೀವ್ ಸೊಸೈಟಿಗಳು. ಮಿಕ್ಕವು ಫೇರ್‌ಪ್ರೈಸ್ ಡಿಪೋಗಳು. ಇದರಲ್ಲಿ ಒಂದು ಯೂನಿಟ್ಟಿಗೆ ಒಂದು ಕೆ ಜಿ ಸಕ್ಕರೆಯನ್ನು ಕೊಡರಾಗುತ್ತಿದೆ. ಒಂದು ಕಾರ್ಡಿಗೆ ತಿಂಗಳಿಗೆ ಮ್ಯಾಗ್ಸಿಮಮ್ 10 ಕೆ ಜಿ ಸಕ್ಕರೆಯನ್ನು ಕೊಡಲಾಗುತ್ತದೆ. ಬೆಂಗಳೂರು ನಗರಕ್ಕೆ 1,733 ಟನ್ ಸಕ್ಕರೆ ಬೇಕಾಗುತ್ತದೆ. ಅದನ್ನು ಪೂರ್ತಿಕೊಡುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರಿನಲ್ಲಿರತಕ್ಕ ನ್ಯಾಯ ಬೆಲೆಯ ಅಂಗಡಿಗಳಷ್ಟಕ್ಕೆ ಎಷ್ಟು ಅಂಗಡಿಗಳು ಸರಿಯಾಗಿ ನಡೆಯದೆ ದುರ್ವ್ಯವಹಾರ ನಡೆಸುತ್ತಿವೆ ಎಂದು ಕಂಪ್ಲೈಂಟ್ ಬಂದಿದೆ, ಕಳೆದ ಒಂದು ವರ್ಷದಲ್ಲಿ ಎಷ್ಟು ಜನಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀಮತಿ ಇ. ಇ. ವಾಜ್.—1971-72 ನೇ ಸಾಲಿನಲ್ಲಿ ಬೆಂಗಳೂರು ನಗರದಲ್ಲಿ 43 ಕೇಸುಗಳನ್ನು ಡಿಟೆಕ್ಟ್ ಮಾಡರಾಯಿತು. 22 ಜನರದು ಲೈಸೆನ್ಸ್ ಕ್ಯಾನ್ಸಲ್ ಮಾಡರಾಯಿತು. 12 ಜನರು ಡಿಪಾಸಿಟ್ ಕಳೆದುಕೊಂಡಿದ್ದಾರೆ. 10 ಜನರಿಗೆ ವಾರ್ನಿಂಗ್ ಕೊಟ್ಟಿದೆ.

ಶ್ರೀ ಕೆ. ಎಂ. ನಾಗಣ್ಣ.—ಅಕ್ಕಿದಾಸ್ತಾನು ಕಡಿಮೆ ಇರುವುದರಿಂದ 40 ಕೆ.ಜಿ. ಇರುವ ಕಡೆ 12 ಕೆ ಜಿ ಕೊಡಲಾಗುತ್ತಿದೆ, ಎಂದು ಹೇಳಿದಿರಿ, ಅಕ್ಕಿಯ ದಾಸ್ತಾನು ಸರಿಯಾಗಿದ್ದರೆ 12 ಕೆ ಜಿ ಯಿಂದ 40 ಕೆ ಜಿ ಗೆ ಏರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀಮತಿ ಇ. ಇ. ವಾಜ್.—ಅಕ್ಕಿ ಜಾಸ್ತಿ ದಾಸ್ತಾನು ಬಂದರೆ ರೇಷನ್‌ನ್ನು ಏರಿಸುತ್ತೇವೆ.

Selection of M.A.S. and Non-M.A.S. to I.A.S.

419. Sri K. R. SRINIVASULU NAYUDU (Shanthinagar).—

Will the Chief Minister be pleased to state :—

(a) whether Class-I (both M.A.S. and non-M.A.S.) Officers are eligible for promotion to I.A.S. Cadre ; if so, the basis adopted for selection ;

(SRI K. R. SRINIVASULU NAYUDU)

(*b*) the number of officers of the above Category who have been promoted to Indian Administrative Service Cadre ;

(*c*) whether the Secretariat Class–1 Officers are also eligible to promotion to I.A.S. Cadre ; if not, the reasons for the same ?

Sri D. DEVARAJ URS (Chief Minister).—(*a*) Under Indian Administrative Service (Appointment by Promotion) Regulations, 1955, all substantive members of the State Civil Service who have completed not less than eight years of continuous service as on 1st January of any year in a post of Assistant Commissioner or any other post or posts declared equivalent thereto are eligible to be considered in that year for promotion to the Indian Administrative Service. No post has been declared equivalent to the post of Assistant Commissioner for the purpose of promotion to Indian Administrative service. Hence non–Mysore Administrative Service Officers are not eligible for promotion to Indian Administrative Service Cadre. However, under Indian Administrative Service (Appointment by Selection) Regulations, 1956, it is open to the State Government to consider, from time to time, the cases of non-Mysore Administrative Service Officers of outstanding merit and ability and have completed not less than eight years of continuous service in Class–I Gazetted post and holding the post in a substantive capacity, for appointment to the Indian Administrative Service to the extent of 15 per cent of the promotion quota.

The selection of Mysore Administrative Service Officers is made by a Selection Committee on the basis of merit and suitability in all respects with due regard to seniority. The selection of non–Mysore Administrative Service Officers, if any recommended by the State Government is also made by the Selection Committee. The Selections made are subject to approval by the Union Public Service Commission.

(*b*) At present there are 27 officers in the promotion quota of the Indian Administrative Service Cadre. Among them one officer has been appointed by Selection from a service other than the Mysore Administrative Service.

(*c*) No ; for the reason stated in reply to clause (*a*).

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಸ್ವಾಮಿ, ಇಲ್ಲಿ ನನ್ನ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಮೈಸೂರು ರಾಜ್ಯ ಆಡಳಿತ ಸೇವಾ ವರ್ಗಕ್ಕೆ ಸೇರಿದ ಹಾಗೂ ಸೇರದ ಪ್ರಥಮ ವರ್ಗದ ಅಧಿಕಾರಿಗಳು ಐ.ಎ.ಎಸ್. ದರ್ಜೆಗೆ ಬಡ್ತಿ ಪಡೆಯಲು ರಾಜ್ಯದ ಸಿವಿಲ್ ಸೇವೆಗಳಲ್ಲಿ ಕಾಯಂಗೊಳಿಸಲಾಗಿರುವ ಸಹಾಯಕ ಕಮೀಷನರಾಗಿ ಅಥವಾ ಅದಕ್ಕೆ ತತ್ಸಮವೆಂದು ಘೋಷಿಸಲಾದ ಹುದ್ದೆಗಳಲ್ಲಿ ಸತತವಾಗಿ 8 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿದ ಅತ್ಯಂತ ದಕ್ಷ, ಮೇಧಾವಿಯಾದ ಪ್ರಥಮ ವರ್ಗದ ಅಧಿಕಾರಿಗಳು ಆಯಾ ವರ್ಷದಲ್ಲಿ ಐ.ಎ.ಎಸ್. ದರ್ಜೆಯ ಹುದ್ದೆಗೆ ಬಡ್ತಿ ಪಡೆಯಲು ಅರ್ಹರೆಂಬುದಾಗಿ ಪರಿಗಣಿಸಲಾಗಿದೆ ಎಂದು ಹೇಳಿದ್ದೀರಿ, ಹಾಗಾದರೆ ಪ್ರಥಮ ವರ್ಗದ ಅಧಿಕಾರಿಯಾಗಿದ್ದು, 8 ವರ್ಷ ಸರ್ವೀಸಾಗಿದ್ದು, ಮೆರಿಟ್ ಮತ್ತು ಸೀನಿಯಾರಿಟಿ ಇರುವ ಕೆಲವು ಅಧಿಕಾರಿಗಳಿಗೆ ಐ.ಎ.ಎಸ್. ದರ್ಜೆಗೆ ಬಡ್ತಿ ಕೊಡಲು ಏತಕ್ಕೆ ಕನ್‌ಸಿಡರ್ ಮಾಡುವುದಿಲ್ಲ ?

† ಶ್ರೀ ಡಿ. ದೇವರಾಜ ಅರಸ್.—ಸೆಕ್ರೆಟೇರಿಯಟ್‌ನಲ್ಲಿ ಕ್ಲಾಸ್ 1 ಆಫೀಸರಾಗಿದ್ದಾತ್ಷಣ ನಾನ್ ಎಂ.ಎ.ಎಸ್. ಆಫೀಸರಾಗಿರತಕ್ಕವರನ್ನು ಐ. ಎ. ಎಸ್. ಹುದ್ದೆಗೆ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಸೆಕ್ರೆಟೇರಿಯಟ್‌ನಲ್ಲಿ ಎಂ.ಎ.ಎಸ್. ಸ್ಕೇಲಿನಲ್ಲಿ ಸಬ್‌ಸ್ಟ್ಯಾಂಟೀವ್ ಪೋಸ್ಟ್ ಹೋಲ್ಡ್ ಮಾಡಿರತಕ್ಕವರು ಇದ್ದರೆ ಅಂಥವರನ್ನು ಕನ್‌ಸಿಡರ್ ಮಾಡಬೇಕಾಗುತ್ತದೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ನ್ಯಾಯವಿ, ತಾವು ಐ.ಎ.ಎಸ್. ಅಧಿಕಾರಿಗಳನ್ನು ಕೆಲಸಕ್ಕೆ ಭರ್ತಿ ಮಾಡಿಕೊಳ್ಳುವ ಮೊದಲು ನಮ್ಮ ರಾಜ್ಯಾಂಗದಲ್ಲಿ, ಸಮಾಜವಾದದಲ್ಲಿ ಮತ್ತು ಪ್ರಜಾಪ್ರಭುತ್ವದಲ್ಲಿ ಯಾವ ಒಂದು ತತ್ವವನ್ನು ಪಾಲನೆ ಮಾಡಬೇಕು ಆ ರೀತಿ ಮಾಡಲು ಅವರಿಗೆ ಒಂದು ಟ್ರೈನಿಂಗ್ ಕ್ಯಾಂಪ್ ಏರ್ಪಾಡು ಮಾಡುವ ಯೋಚನೆ ಮಾಡಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್.—ಅವರು ಟ್ರೈನಿಂಗ್ ಆಗಿಯೇ ಅಧಿಕಾರಿಗಳಾಗುವುದು.

ಶ್ರೀ ಕೆ. ಪ್ರಭಾಕರ್.—ಈ ಸೆಕ್ರೆಟರಿಯೇಟಿನಲ್ಲಿ ಕೆಲಸ ಮಾಡತಕ್ಕಂತಹ ಹಲವು ಆಧಿಕಾರಿಗಳನ್ನು ಇರ್ಲೇ ಇಟ್ಟಿರುತ್ತೀರಿ ; ಮತ್ತು ಹೊರಗಿನವರನ್ನು ಇಲ್ಲಿಗೆ ಕಳಿಸುವುದು ದುರ್ಲಭವಾಗಿದೆ. ಆದ್ದರಿಂದ ಇಲ್ಲಿ ಒಂದು ಟೈಟ್ ಅಡ್ಮಿನಿಸ್ಟ್ರೇಶನ್ ಆಗಿ ಮನಾಪಲಯಾಗಿದೆ. ಆದ್ದರಿಂದ ಇದನ್ನು ತಪ್ಪಿಸುವುದಕ್ಕೆ ಸರ್ಕಾರದವರು ಏನಾದರೂ ಯೋಚನೆ ಮಾಡಿದ್ದೀರಾ ?

Sri D. DEVARAJ URS.—Secretariat work is slightly different from the executive work outside the secretariat. Because of the special nature of work in the Secretariat it may not be desirable to change the officers except from one section to another or from one department to another within the Secretariat. The nature of work itself is such they cannot be sent outside. But there are certain poses like Deputy Secretaries and Joint Secretaries who will be now and then changed and sent even outside for executive work.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ಈ ಐ ಎ. ಎಸ್. ಗೆ ಅಭ್ಯರ್ಥಿಗಳನ್ನು ಚುನಾಯಿಸುವುದಕ್ಕೆ ಅಥವಾ ಎಂ. ಎ. ಎಸ್. ಗೆ ಚುನಾಯಿಸುವುದಕ್ಕೆ ಒಂದು ಸೆಲೆಕ್ಷನ್ ಕಮಿಟಿ ಇದೆ. ಆ ಸೆಲೆಕ್ಷನ್ ಕಮಿಟಿಯು ತನ್ನ ಕರ್ತವ್ಯವನ್ನು ಸರಿಯಾಗಿ ಪರಿಪಾಲನೆ ಮಾಡದಿರುವುದರಿಂದ ಈ ಪರಿಶಿಷ್ಟವರ್ಗದ ಮತ್ತು ಪಂಗಡದ ಜನಾಂಗದವರಿಗೆ ಸರಿಯಾದ ರೀಷಿಯೋದಲ್ಲಿ ಅವಕಾಶ ಆಗಲಲ್ಲ. ಆದ್ದರಿಂದ ಇದನ್ನು ಸರಿಪಡಿಸುವುದಕ್ಕಾಗಿ ಈ ಸೆಲೆಕ್ಷನ್ ಕಮಿಟಿಯಲ್ಲಿ ಪರಿಷ್ಟ ವರ್ಗದ ಸದಸ್ಯರನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಎಲ್ಲಾ ಪರಿಶಿಷ್ಟ ವರ್ಗದವರನ್ನೂ ಸೆಲೆಕ್ಟ್ ಮಾಡಬೇಕೆನ್ನುವ ಅಭಿಪ್ರಾಯದಿಂದ ಹೀಗೆ ಹಾಕುವುದಕ್ಕಾಗುವುದಿಲ್ಲ. ಹಾಗೆ ನೋಡಿದರೆ ಪರಿಶಿಷ್ಟ ವರ್ಗದಲ್ಲಿ ಕೆಲವಾರು ವರ್ಗಗಳು ಇವೆ. ಆಗ ತಮ್ಮದು ತಮ್ಮದು ಎಂದು ಬರುತ್ತದೆ. ಅದು ಕೊನೆಯಾಗುವುದಿಲ್ಲ. While making selections there may be instancee where some partiality might have been shown. I don't say that everything is satisfactory. We will try our best to see that Committees which function for selection of such officers ultimately do their work without showing any partiality to anybody.

ಶ್ರೀ ಎಂ. ಎಸ್. ಕೃಷ್ಣನ್.—ತಾವು (ಎ)ಗೆ ಉತ್ತರವಾಗಿ 15 ಪರ್‌ಸೆಂಟ್ ಪ್ರೊಮೋಷನ್ ಕೋಟಾ ಹಾಕಿದ್ದೀರಿ. ಅಂದರೆ ಒಟ್ಟು ಪ್ರೊಮೋಷನಿನಲ್ಲಿ 15 ಪರ್‌ಸೆಂಟ್ ಇದೆಯೆಂದು ಅರ್ಥವಾಗುತ್ತದೆ. ಅದನ್ನು ಜಾಸ್ತಿ ಮಾಡಬೇಕೆಂದು ಏನಾದರೂ ಮನವಿ ಬಂದಿದೆಯೇ ; ಹಾಗೆ ಬಂದಿದ್ದರೆ ಅದರ ಬಗ್ಗೆ ಸರ್ಕಾರದ ಅಭಿಪ್ರಾಯವೇನು ?

ಶ್ರೀ ಡಿ. ದೇವರಾಜ ಅರಸ್.—ನನಗೆ ಮನವಿ ಬಂದದ್ದು ಜ್ಞಾಪಕವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇದರ ಬಗ್ಗೆ ಮನವಿಗಳು ಏನಾದರೂ ಬಂದಿವೆಯೇ ? Have you received any representation from Mysore IAS officers ?

Sri D. DEVARAJ URS.—I have no knowledge of any such representations received so far.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯುಡು.—(ಬ)ಗೆ ಉತ್ತರವಾಗಿ 27 ಮಂದಿಗೆ ಪ್ರೊಮೋಷನ್ ಕೋಟಾದಲ್ಲಿ ಕೊಟ್ಟಿದ್ದಾರೆಂದು ಹೇಳಿದ್ದೀರಿ. ಆದರೆ ಸೆಲೆಕ್ಷನ್ ಕಮಿಟಿಯವರು ಒಬ್ಬರನ್ನೇ ಆರಿಸುವುದಕ್ಕೆ ಕಾರಣವೇನು ?

Sri D. DEVARAJ URS.—If he is talking of any particular instance I would like to have separate notice for that.

Grant of Loan by Mysore Tobacco Company

432. Sri V. KRISHNA RAO (Gowribidnur).—

Will the Minister for Agriculture and Forests be pleased to state :—

(*a*) whether it is a fact that the Mysore Tobacco Company was advancing loans for purchasing cured tobacco leaves from the growers ; if so, the reasons for stopping the grant of loan by this Company from this year ;

(*b*) the arrangements made to safeguard the interest of the growers by the Government ;

(*c*) whether it has come to the notice of the Government that formation of a Tobacco Board is very essential and such proposal should be taken up early ?

Sri K. H. PATIL (Minister for Agriculture and Forests).—

(*a*) Yes. The Mysore Tobacco Co., continues to advance loan except in Gowribidanur area. The Company is not advancing the loan during the current year in this area as it feels difficult to dispose of cured leaves to the buyers due to high content of chlorine in the cured leaves, which is undesirable.

(*b*) No arrangements are made.

(*c*) Yes. The formation of Tobacco Board is under the active consideration of Government of India.

ಶ್ರೀ ವಿ. ಕೃಷ್ಣರಾವ್.—ಇವತ್ತು ಮೈಸೂರು ಟೊಬೇಕೋ ಕಂಪೆನಿಯಲ್ಲದೆ ಗೋಲ್ಡನ್ ಟೊಬೊಕೋ ಕಂಪೆನಿ ಮತ್ತು ಇತರ ಕಂಪೆನಿಗಳು ಇವೆ. ಗೌರಿಬಿದನೂರಿನ ಹೊಗೆಸೊಪ್ಪನ್ನು ಬೇರೆಯವರ ಕೊಂಡುಕೊಳ್ಳುತ್ತಿದ್ದರೂ, ಮೈಸೂರು ಟೊಬೇಕೋ ಕಂಪೆನಿಯವರು ಏಕೆ ಕೊಂಡು ಕೊಳ್ಳುತ್ತಿಲ್ಲ ?

† ಶ್ರೀ ಕೆ. ಎಚ್. ಪಾಟೀಲ್.—ಗೌರಿಬಿದನೂರಿಗೆ ನಾಲ್ಕೂ ಕಂಪೆನಿಗಳು ಸಾಲವನ್ನು ಕೊಡುತ್ತಿದ್ದವು. ಆದರೆ ಈಗ ತಾವು ಕೇಳಿರುವಂತಹ ಕಂಪೆನಿಯವರು ಎಕ್ಸ್‌ಪೋರ್ಟ್ ಮಾಡಬೇಕಾಗಿರುವುದರಿಂದ, ಅಲ್ಲಿ ಅವರಿಗೆ ಬೇಕಾದಂತಹ ಟೊಬೇಕೊ ಬೆಳೆಯುತ್ತಿಲ್ಲವಾದ್ದರಿಂದ ಅದನ್ನು ಬಂದ್ ಮಾಡಿದ್ದಾರೆ.

ಶ್ರೀ ವಿ. ಕೃಷ್ಣರಾವ್.—ಬಾಕಿ ಕಂಪೆನಿಯವರು ಎಕ್ಸ್‌ಪೋರ್ಟ್ ಮಾಡುವುದಿಲ್ಲವೇ ?